**ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,**
ದೇವರಾಜ ಅರಸ್ ಮಾರ್ಕೆಟ್, ಹಾಸನ.  264825

| ವಾರ್ಷಿಕ ಬಡ್ಡಿ ದರದ ವಿವರಗಳು | ಸಾಮಾನ್ಯರಿಗೆ % | ಹಿರಿಯ ನಾಗರಿಕರಿಗೆ % |
|---|---|---|
| * 1 ವರ್ಷದಿಂದ 3 ವರ್ಷಗಳವರೆಗೆ | 10.5 | 11 |
| * 181 ದಿನಗಳಿಂದ 365 ದಿನಗಳವರೆಗೆ | 8 | 8.5 |
| * 91 ದಿನಗಳಿಂದ 180 ದಿನಗಳವರೆಗೆ | 7 | 7.5 |
| * 31 ದಿನಗಳಿಂದ 90 ದಿನಗಳವರೆಗೆ | 6 | 6.5 |

* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

# ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ    ವ್ಯವಸ್ಥಾಪಕ ಸಂಪಾದಕ : ಎಸ್.ಎನ್.ಮಂಜುನಾಥದತ್ತ






### '2030 ಅಲ್ಲ 2028ಕ್ಕೇ ಭಾರತ ವಿಶ್ವದ 3ನೇ ಅತಿ ದೊಡ್ಡ ಅರ್ಥ ವ್ಯವಸ್ಥೆಯಾಗಲಿದೆ'

2030 ಅಲ್ಲ, ಇನ್ನೂ 2 ವರ್ಷ ಮುಂಚಿತವಾಗಿಯೇ ಅಂದರೆ 2028ಕ್ಕೇ ಭಾರತ ಜಪಾನ್ ದೇಶವನ್ನು ಹಿಂದಿಕ್ಕಿ ವಿಶ್ವದ 3ನೇ ಅತೀ ದೊಡ್ಡ ಅರ್ಥವ್ಯವಸ್ಥೆಯಾಗಲಿದೆ ಎಂದು ವರದಿಯೊಂದು ಹೇಳಿದೆ. ಅಮೆರಿಕದ ಖ್ಯಾತ ವಿತ್ತ ಸಂಸ್ಥೆ ಬ್ಯಾಂಕ್ ಆಫ್ ಅಮೆರಿಕ ಮೆರಿಲಿಂಚ್ ಏಜೆನ್ಸಿ ಈ ಬಗ್ಗೆ ವರದಿ ನೀಡಿದ್ದು, 2028ರ ವೇಳೆಗೆ ಭಾರತ ವಿಶ್ವದ 3ನೇ ಅತೀ ದೊಡ್ಡ ಅರ್ಥ ವ್ಯವಸ್ಥೆಯಾಗಿ ಗುರುತಿಸಿಕೊಳ್ಳಲಿದೆ ಎಂದು ಹೇಳಿದೆ.



### ಜಾರ್ಜ್ ರಾಜಿನಾಮೆಗೆ ಪಟ್ಟು : 2ನೇ ದಿನದ ಕಲಾಪವೂ ಬಲಿ

ಡಿವೈಎಸ್ಪಿ ಎಂ.ಕೆ.ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್ ರಾಜಿನಾಮೆ ನೀಡಬೇಕು ಎಂದು ಮಂಗಳವಾರ ಬೆಳಗಾವಿ ವಿಧಾನಸಭೆ ಅಧಿವೇಶನದಲ್ಲಿ ಬಿಜೆಪಿ ಸದಸ್ಯರು ಪಟ್ಟು ಹಿಡಿದಿದ್ದರಿಂದಾಗಿ ಚಳಿಗಾಲದ ಅಧಿವೇಶನದ ಎರಡನೇ ದಿನದ ಕಲಾಪ ಬಲಿಯಾಯಿತು.



### ಶಶಿಕಲಾಗೆ ಸಂಬಂಧಿಸಿದ 1400 ಕೋಟಿ ಮೌಲ್ಯದ ಆಸ್ತಿ ಪತ್ತೆ!

ತಮಿಳುನಾಡು ಮಾಜಿ ಸಿಎಂ ದಿ॥ಜೆ.ಜಯಲಲಿತಾ ಅವರ ಆಪ್ತೆ ವಿ.ಕೆ.ಶಶಿಕಲಾಗೆ ಸಂಬಂಧಿಸಿದ ಸುಮಾರು 1400 ಕೋಟಿ ರೂ. ಮೌಲ್ಯದ ದಾಖಲೆ ರಹಿತ ಆದಾಯ ಪತ್ತೆಯಾಗಿದೆ ಎಂದು ಐ.ಟಿ. ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಚೆನ್ನೈನಲ್ಲಿರುವ ಶಶಿಕಲಾ ಅವರ ಪೋಯಸ್ ಗಾರ್ಡನ್ ಸೇರಿದಂತೆ ದೇಶದ ವಿವಿಧ 40 ಪ್ರದೇಶಗಳಲ್ಲಿ ಐ.ಟಿ.ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ    JANATHAMADHYAMA    KARKAN. RNI 41566.    ಸಂಪುಟ : 41    ಸಂಚಿಕೆ :10    ಬುಧವಾರ ನ.15, 2017    ದೂರವಾಣಿ : 268494    ಪುಟ-4    ರೂ.2-00    NO. HSN-761/ 2015-17

# ಕೋರ್ಟ್ ಕಟ್ಟಡ ಕಾಮಗಾರಿ : ಯಾಕಿಷ್ಟು ವಿಳಂಬ?

 ವೆಂಕಟೇಶ್

ಹಾಸನ : ಅಭಿವೃದ್ಧಿ ವಿಚಾರದಲ್ಲಿ ನಮ್ಮ ಜಿಲ್ಲೆ ನಿರೀಕ್ಷಿತ ಮಟ್ಟದಲ್ಲಿ ಸಾಗುತ್ತಿಲ್ಲ. ಮೊದಲಿನಿಂದಲೂ ಇದೊಂದು ಶಾಪವಾಗಿ ಪರಿಣಮಿಸಿದೆ. ಹಾಗಾಗಿ ಜನರು ರೋಸಿ ಹೋಗಿದ್ದಾರೆ. ಜನಪ್ರತಿನಿಧಿಗಳ ವಿರುದ್ಧ ಸಾರ್ವಜನಿಕರು ಹಿಡಿಶಾಪ ಹಾಕುತ್ತಲೇ ಇದ್ದಾರೆ. ಇಷ್ಟೆಲ್ಲಾ ಇದ್ದರೂ ಅಭಿವೃದ್ಧಿಗೆ ಹಿನ್ನಡೆಯೇ ಆಗಿದೆ.

ನಗರದ ಹೊಸ ಬಸ್ ನಿಲ್ದಾಣ ಎದುರಿಗೆ ಜಿಲ್ಲಾ ನ್ಯಾಯಾಲಯ ಕಟ್ಟಡಗಳ ಸಮುಚ್ಚಯ ಕಾಮಗಾರಿ ಆರಂಭಗೊಂಡು ಏಳು ವರ್ಷವಾಗಿದ್ದರೂ ಇನ್ನೂ ಪೂರ್ಣಗೊಂಡಿಲ್ಲ. ಏಳು ಬೀಳು ಎಂಬಂತೆ ಇನ್ನೂ ಕೂಡ ಕಾಮಗಾರಿಯೇ ಮುಗಿದಿಲ್ಲ.

2007ರಲ್ಲಿ ನ್ಯಾಯಾಲಯಗಳ ಕಟ್ಟಡ ಸಮುಚ್ಚಯಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರೆಯಿತು. ಆಗ 55 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ಸಮುಚ್ಚಯಕ್ಕೆ ನೀಲನಕ್ಷೆ ತಯಾರಾಗಿತ್ತು. 2014ಕ್ಕೆ ಕಾಮಗಾರಿ ಸಂಪೂರ್ಣ ಮುಗಿಯಬೇಕಿತ್ತು. ಆದರೆ ಯೋಜನೆಗೆ ನಿಗದಿತ ಅವಧಿಯಲ್ಲಿ ಅನುದಾನ ಬಿಡುಗಡೆಯಾಗಲಿಲ್ಲ. ಆ ಪರಿಣಾಮ ಕಾಮಗಾರಿ ಕುಂಟುತ್ತಾ ಸಾಗಿತು. ವಿಳಂಬದಿಂದಾಗಿ ಈಗ 32 ಕೋಟಿ ರೂ. ಹೆಚ್ಚುವರಿ ಹೊರೆ ಬೀಳಲಿದೆ. ನಿಗದಿತ ಸಮಯಕ್ಕೆ ಕಾಮಗಾರಿ ಪೂರ್ಣಗೊಂಡಿದ್ದರೆ 55 ಕೋಟಿ ರೂ. ಸಾಕಾಗುತ್ತಿತ್ತು. ಆದರೆ ವಿಳಂಬದಿಂದ ಈಗ 88 ಕೋಟಿ ರೂ. ವೆಚ್ಚ ಮಾಡಬೇಕಾಗಿದೆ.

ಮೊದಲ ಹಂತದ ಕಾಮಗಾರಿ 2012ಕ್ಕೆ 21 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಂಡಿತು. 2014-15ನೇ ಸಾಲಿನಲ್ಲಿ ಈ ಯೋಜನೆಗೆ ಹಣ ಬಿಡುಗಡೆಯಾಗಲಿಲ್ಲ. 2ನೇ ಹಂತದಲ್ಲಿ 66.9 ಕೋಟಿ ರೂ.ವೆಚ್ಚದಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. 5 ವರ್ಷ ವಿಳಂಬವಾದ ಕಾರಣ ಖರ್ಚು ವೆಚ್ಚ ಕೂಡ ಜಾಸ್ತಿಯಾಗಿದೆ. (-ಪುಟ 4ಕ್ಕೆ)

**ಅಂಕಿ ಅಂಶ**

**2007**ರಲ್ಲಿ
ಆಡಳಿತಾತ್ಮಕ ಮಂಜೂರಾತಿ

**2010**ರಲ್ಲಿ
ಮೊದಲ ಹಂತದ ಕಾಮಗಾರಿ

**21**
ಕೋಟಿ ರೂ. ವೆಚ್ಚ

2ನೇ ಹಂತಕ್ಕೆ
**66.9** ಕೋಟಿ



ಜಿಲ್ಲಾ ನ್ಯಾಯಾಲಯಗಳ ಕಟ್ಟಡ ಸಮುಚ್ಚಯ ಮುಂಭಾಗ ಕೆಲಸ ಮುಗಿದಿದೆ. ಆದರೆ ಹಿಂಭಾಗ ಇನ್ನೂ ಪ್ರಗತಿಯಲ್ಲಿದೆ.

-  ಒಟ್ಟು ವೆಚ್ಚ ಅಂದಾಜು-55 ಕೋಟಿ
-  5 ವರ್ಷಗಳ ವಿಳಂಬಕ್ಕೆ ಮತ್ತೆ ಹಣ ಜಾಸ್ತಿ ಖರ್ಚು
-  ಈಗ 88 ಕೋಟಿ ವೆಚ್ಚಕ್ಕೆ ಏರಿಕೆ
-  2014ಕ್ಕೆ ಕಾಮಗಾರಿ ಮುಗಿಯಬೇಕಿತ್ತು
-  2014-15ನೇ ಸಾಲಿನಲ್ಲಿ ಹಣ ಬಿಡುಗಡೆ ಆಗಲಿಲ್ಲ
-  ಬೆಂಗಳೂರು ಮೂಲದ ಬಿ.ಎಸ್.ಆರ್. ಕಂಪೆನಿಗೆ ಗುತ್ತಿಗೆ
-  ಈ ತಿಂಗಳ ಅಂತ್ಯಕ್ಕೆ ಕಾಮಗಾರಿ ಮುಗಿಯಬೇಕಿತ್ತು

" ಸಾರ್ವಜನಿಕರ ದುಡ್ಡು ಹೇಗೆ ಪೋಲಾಗುತ್ತದೆ ಎಂಬುದಕ್ಕೆ ಇದೊಂದು ಸಣ್ಣ ನಿದರ್ಶನವಷ್ಟೇ. ಕೋಟ್ಯಾಂತರ ರೂ. ಹಣ ವೆಚ್ಚವಾಗಿದೆ. ಕಕ್ಷಿದಾರರಿಗೆ ಇದರ



ಪ್ರಯೋಜನವಾಗಲಿಲ್ಲ. ಹಿಂದೆ 55 ಕೋಟಿ ರೂ. ವೆಚ್ಚದಲ್ಲಿ ಯೋಜನೆ ರೂಪಿಸಲಾಗಿತ್ತು. ಈಗ 88 ಕೋಟಿಗೆ ಹೆಚ್ಚಾಗಿದೆ. ಇದನ್ನು ದುಂದು ವೆಚ್ಚ ಎನ್ನದೆ ಬೇರೆ ವಿಧಿಯಿಲ್ಲ. ಈಗಿಂದೀಗಲೇ ಎಚ್ಚೆತ್ತುಕೊಂಡು ಕೆಲಸ ಮಾಡಬೇಕು.

-ಮಂಜುನಾಥ ಮೋರೆ,
ಸಾಮಾಜಿಕ ಕಾರ್ಯಕರ್ತ.

## ಮುಂದಿನ ವರ್ಷ ಜೂನ್ ವೇಳೆಗೆ ಪೂರ್ಣ

ಜಿಲ್ಲಾ ನ್ಯಾಯಾಲಯಗಳ ಕಟ್ಟಡ ಸಮುಚ್ಚಯ ಕಾಮಗಾರಿ ಈ ತಿಂಗಳ ಅಂತ್ಯದಲ್ಲಿ ಪೂರ್ಣಗೊಳ್ಳಬೇಕಿತ್ತು. 2ನೇ ಹಂತದ ಕಾಮಗಾರಿ ವಿಳಂಬವಾದ್ದರಿಂದ ನವೆಂಬರ್ 23ಕ್ಕೆ ಪೂರ್ಣಗೊಳ್ಳುವುದೆಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹೇಳುತ್ತಲೇ ಇದ್ದರು. ಆದರೆ ಇದಕ್ಕೆ ಇನ್ನೂ 6 ತಿಂಗಳ ಸಮಯ ಬೇಕಾಗಿದೆ.

ನೂತನ ಜಿಲ್ಲಾ ಸತ್ರ ನ್ಯಾಯಾಲಯದ ಕಟ್ಟಡ ಹಿಂಭಾಗದಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಹಾಗಾಗಿ ಮುಂದಿನ ಜೂನ್‌ವೊಳಗೆ ಸಾರ್ವಜನಿಕ ಸೇವೆಗೆ ಸಮರ್ಪಿಸುವ ಗುರಿಯನ್ನು ಹೊಂದಲಾಗಿದೆ.

ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಗುರುಲಿಂಗಪ್ಪ ಪ್ರತಿಕ್ರಿಯಿಸಿ, ಮೊದಲ ಹಂತದ ಕಾಮಗಾರಿಗೆ 21 ಕೋಟಿ ರೂ. ವೆಚ್ಚವಾಗಿದೆ. ಎರಡನೇ ಹಂತದ ಕಾಮಗಾರಿ 66.9 ಕೋಟಿ ರೂ. ವೆಚ್ಚದಲ್ಲಿ ಪ್ರಗತಿಯಲ್ಲಿದೆ. ಶೇ.75ರಷ್ಟು ಕೆಲಸವಾಗಿದೆ. ಇನ್ನು ಶೇ.25ರಷ್ಟು ಬಾಕಿ ಇದೆ. ಇನ್ನು 6 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

2007ರಲ್ಲಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ದೊರೆಯಿತು. 2010ಕ್ಕೆ ಮೊದಲ ಹಂತದ ಕಾಮಗಾರಿ ಆರಂಭಗೊಂಡಿತು. ಹಲವು ಕಾರಣಗಳಿಂದ ವಿಳಂಬವಾಯಿತು. ಇನ್ನು ವಿಳಂಬಕ್ಕೆ ಅವಕಾಶ ಇಲ್ಲ. ಹಣಕಾಸಿಗೂ ತೊಂದರೆ ಇಲ್ಲ ಎಂದು 'ಜನತಾಮಾಧ್ಯಮ'ಕ್ಕೆ ತಿಳಿಸಿದರು.

" ಜಿಲ್ಲಾ ಸತ್ರ ನ್ಯಾಯಾಲಯದ ಕಟ್ಟಡ ವಿಳಂಬವಾಗಿರುವುದು ಬೇಸರ ತರಿಸಿದೆ. ಇದಕ್ಕೆ ಆಡಳಿತ ವ್ಯವಸ್ಥೆಯೇ ಕಾರಣ. ಬೆಕ್ಕಿಗೆ ಗಂಟೆ ಕಟ್ಟುವವರಾರು? ಜಿಲ್ಲಾ ಉಸ್ತುವಾರಿ ಸಚಿವ



ಎ.ಮಂಜು, ಶಾಸಕ ಹೆಚ್.ಎಸ್. ಪ್ರಕಾಶ್ ಈ ವಿಚಾರದಲ್ಲಿ ತುರ್ತು ಗಮನ ಹರಿಸಬೇಕು. ಬರೀ ನ್ಯಾಯಾಲಯವಾದರೆ ಸಾಲದು, ಫ್ಲೈ ಓವರ್ ಕೆಲಸ ಆ ವೇಳೆಗೆ ಪೂರ್ಣಗೊಳ್ಳಬೇಕು.

-ವೆಂಕಟೇಶ್,
ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ

" ಹೆಚ್.ಡಿ.ರೇವಣ್ಣ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಈ ಕಾಮಗಾರಿಗೆ ಚಾಲನೆ ದೊರೆಯಿತು. ಆದರೆ ನಂತರದ ಸರ್ಕಾರಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಗಮನ ಹರಿಸಲಿಲ್ಲ.

-ಹೆಚ್.ಎಸ್.ಅನಿಲ್ ಕುಮಾರ್,
ನಗರಸಭಾ ಅಧ್ಯಕ್ಷ

" ವಕೀಲರು ಹಾಗೂ ಕಕ್ಷಿದಾರರ ಹಿತದೃಷ್ಟಿಯಿಂದ ನೂತನ ಕಟ್ಟಡ ಬೇಗ ಪೂರ್ಣಗೊಳ್ಳಬೇಕು. ಇದಕ್ಕೆ ಹಲವಾರು ಬಾರಿ ಒತ್ತಡ ಹೇರುತ್ತಿದ್ದೇವೆ. ವಿಳಂಬ ಸಹಿಸಲು ಸಾಧ್ಯವಿಲ್ಲ.

-ನರಸಿಂಹಮೂರ್ತಿ, ಜಿಲ್ಲಾ ವಕೀಲರ
ಸಂಘದ ಮಾಜಿ ಅಧ್ಯಕ್ಷ

" ಈ ಸಂಬಂಧ ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೂ ಚರ್ಚೆ ನಡೆಸಿದ್ದೇನೆ. 6 ತಿಂಗಳು ಸಮಯಾವಕಾಶ ಕೇಳಿದ್ದಾರೆ. ಈಗಲೇ ವಿಳಂಬವಾಗಿದೆ. ಆ ಬಗೆಗೆ ತಮಗೂ ಬೇಸರವಿದೆ. ಹಿಂದಿನ ಸರ್ಕಾರ ಅನುದಾನ ಬಿಡುಗಡೆ ಮಾಡಲಿಲ್ಲ.

-ಹೆಚ್.ಕೆ.ಮಹೇಶ್, ಕಾಂಗ್ರೆಸ್ ಮುಖಂಡ

" ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ಏಳು ವರ್ಷ ಬೇಕೆ? 5 ವರ್ಷಗಳ ಅವಧಿಯಲ್ಲಿ ಏನೂ ಕೆಲಸ ನಡೆಯಲಿಲ್ಲ. ಸರ್ಕಾರದ ಹಣ ನೀರಿನಲ್ಲಿ ಹೋಮ ಮಾಡಿದಂತಾಗಿದೆ. ತಕ್ಷಣ ನ್ಯಾಯಾಲಯ ಕಟ್ಟಡ ಆರಂಭಿಸಬೇಕು.

ವೇಣುಗೋಪಾಲ್, ಜಿಲ್ಲಾ ಬಿಜೆಪಿ ವಕ್ತಾರ

## ಮುಂದೈತೆ ಸಂಚಾರಕ್ಕೆ ಕಷ್ಟ!

ಜಿಲ್ಲಾ ಸತ್ರ ನ್ಯಾಯಾಲಯ ಮುಂದಿನ ವರ್ಷ ಸಾರ್ವಜನಿಕ ಸೇವೆಗೆ ಸಮರ್ಪಣೆಗೊಂಡರೂ ಸಂಚಾರಕ್ಕಂತೂ ಭಾರೀ ಕಷ್ಟವಾಗಲಿದೆ.

ನಗರದ ಎನ್.ಆರ್.ಸರ್ಕಲ್‌ನಿಂದ ಹೊಸ ನ್ಯಾಯಾಲಯಕ್ಕೆ ತೆರಳಬೇಕಾಗಿದ್ದು, ವಾಹನ ಸಂಚಾರ ದಟ್ಟಣೆಯಾಗಲಿದೆ. ಇಲ್ಲಿ ಫ್ಲೈ ಓವರ್ ನಿರ್ಮಾಣವಾಗದಿದ್ದರಂತೂ ಸಂಚಾರ ಭಾರೀ ಕಷ್ಟವಾಗಲಿದೆ. ಎನ್.ಆರ್.ಸರ್ಕಲ್‌ನಲ್ಲಿ ಮೇಲ್ಸೇತುವೆ ನಿರ್ಮಿಸಬೇಕೆಂಬ ಒತ್ತಡವಿದ್ದರೂ ಪ್ರಯೋಜನವಾಗಿಲ್ಲ. ಮುಂಬರುವ ದಿನಗಳಲ್ಲಿ ನಮ್ಮ ಜನ ಇನ್ನೂ ಕಷ್ಟ ಎದುರಿಸಬೇಕಾಗಬಹುದು.

## 17 ಕೋರ್ಟ್ ಕಟ್ಟಡ ಬೇಕು, ಆದರೆ...

ಜಿಲ್ಲಾ ನ್ಯಾಯಾಲಯಗಳ ಕಟ್ಟಡ ಸಮುಚ್ಚಯದಲ್ಲಿ 17 ಕೋರ್ಟ್‌ಗಳು ಬೇಕು. ಮ್ಯಾಜಿಸ್ಟ್ರೇಟ್-8, ಸಿಜೆಎಂ-3, ಡಿಸ್ಟ್ರಿಕ್ಟ್ ಕೋರ್ಟ್-5, ಮೀಡಿಯೇಷನ್ ಸೆಂಟರ್-1. ಇವೆಲ್ಲಾ ಒಟ್ಟು ಸೇರಿ 17 ಕೋರ್ಟ್ ಸಮುಚ್ಚಯಗಳು ಬೇಕು. ಆದರೆ ಇಲ್ಲಿರುವುದು 13 ಮಾತ್ರ. ಇನ್ನು 4 ನ್ಯಾಯಾಲಯಗಳ ಕೊರತೆ ಎದುರಾಗಲಿದೆ.

ಇತ್ತೀಚೆಗೆ ನಗರಕ್ಕೆ ಆಗಮಿಸಿದ್ದ ಹೈಕೋರ್ಟ್‌ನ ಜಿಲ್ಲಾ ನ್ಯಾಯಾಲಯ ಆಡಳಿತಾಧಿಕಾರಿಗಳು ಈ ಬಗ್ಗೆ ಗಮನ ಹರಿಸುವಂತೆಯೂ ಸೂಚಿಸಿದ್ದಾರೆ. ಆಡಳಿತ ಅಧಿಕಾರಿಗಳನ್ನು ಜಿಲ್ಲಾ ವಕೀಲರ ಸಂಘ ಕೂಡ ಭೇಟಿಯಾಗಿ ಚರ್ಚೆ ನಡೆಸಿದೆ.

# ರಕ್ತದ ಕ್ಯಾನ್ಸರ್ : ಬಾಲಕ ಚಂದ್ರಶೇಖರ್ ನಿಧನ

ಹಾಸನ : ರಕ್ತದ ಕ್ಯಾನ್ಸರ್ (ಅಕ್ಯೂಟ್ ಮೈಯೆಲಾಯ್ಡ್ ಲ್ಯೂಕೀಮಿಯಾ)ನಿಂದಾಗಿ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಬಿ.ಎಂ.ಟಿ. ಚಿಕಿತ್ಸೆ ಪಡೆಯುತ್ತಿದ್ದ ದೊಡ್ಡ ಆಲದಹಳ್ಳಿಯ ಬಾಲಕ ಚಂದ್ರಶೇಖರ್ ಮಂಗಳವಾರ ಬೆಳಿಗ್ಗೆ ಮೃತಪಟ್ಟಿದ್ದಾನೆ.

ಚಂದ್ರಶೇಖರ್ ಒಂದೂವರೆ ತಿಂಗಳಿನಿಂದಲೂ ಬಿ.ಎಂ.ಟಿ. ಚಿಕಿತ್ಸೆ ಪಡೆಯುತ್ತಿದ್ದ. ತೀವ್ರ ನಿಗಾ ಘಟಕದಲ್ಲಿ ಬಾಲಕನನ್ನು ಇರಿಸಲಾಗಿತ್ತು. ಇತ್ತೀಚೆಗೆ ಚೇತರಿಸಿಕೊಂಡಿದ್ದ ನಂತರ ಜನರಲ್ ವಾರ್ಡ್‌ಗೆ ಸ್ಥಳಾಂತರಿಸಲಾಗಿತ್ತು. ಮೂರು ದಿನಗಳ ಹಿಂದೆ ತೀವ್ರ ಕೀವು ಬರತೊಡಗಿತು. ಹಾಗಾಗಿ ಮತ್ತೆ ಐಸಿಯುಗೆ ವರ್ಗಾಯಿಸಲಾಗಿತ್ತು. ಬೆಳಿಗ್ಗೆ ಚಿಕಿತ್ಸೆ



ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ಜನತಾಮಾಧ್ಯಮ ಪತ್ರಿಕೆಯು ಬಾಲಕನ ಚಿಕಿತ್ಸೆಗೆ ದೊಡ್ಡ ಅಭಿಯಾನವನ್ನೇ ಆರಂಭಿಸಿತ್ತು. 5,34,112 ರೂ.ಗಳನ್ನು ಸಂಗ್ರಹಿಸಿ ಬಾಲಕನ ಚಿಕಿತ್ಸೆಗೆ ನೆರವಾಗಿತ್ತು. ಅನೇಕರು ನೆರವು ನೀಡಿದ್ದರು. ನೂರಾರು ಜನ ನೇರವಾಗಿ ಬಾಲಕನಿಗೆ ಹಣ ಕೊಟ್ಟಿದ್ದರು. (-ಪುಟ 4ಕ್ಕೆ)

### 'ಭರವಸೆ ಹೊಂದಿದ್ದೆವು'

ಚಂದ್ರಶೇಖರ್ ಬಿಎಂಟಿ ಚಿಕಿತ್ಸೆಯಿಂದ ಚೇತರಿಸಿಕೊಂಡಿದ್ದನು. ನಾವಂತೂ ಭರವಸೆಯನ್ನೇ ಇಟ್ಟುಕೊಂಡಿದ್ದೆವು. ಆದರೂ ಕೊನೆಗೆ ನನ್ನ ಮಗ ಉಳಿಯಲಿಲ್ಲ ಎಂದು ಬಾಲಕನ ತಂದೆ ಸುರೇಶ್ ಬಿಕ್ಕಿ ಬಿಕ್ಕಿ ಅತ್ತರು. ನೂರಾರು ಜನ ನೆರವು ನೀಡಿದ್ದಾರೆ. ಏನೇ ಮಾಡಿದರೂ ಉಳಿಸಿಕೊಳ್ಳಲಾಗಲಿಲ್ಲ ಎಂದರಲ್ಲದೆ, ನೆರವು ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

### ಹಲವರ ಸಂತಾಪ

ಬಾಲಕನಿಗೆ ನೆರವು ನೀಡಿದ ಹಲವರು ಸಂತಾಪ ವ್ಯಕ್ತಪಡಿಸಿದ್ದಾರೆ. ಡಾ॥ಸಾವಿತ್ರಿ ಅವರು ಬಾಲಕ ಮೃತಪಟ್ಟಿದ್ದಕ್ಕೆ ದುಃಖ ವ್ಯಕ್ತಪಡಿಸಿದ್ದಾರೆ. ಕುವೆಂಪು ಕಾಲೇಜಿನ ಬಿ.ಈ.ಶಿವರಾಮೇಗೌಡ, ನಗರದ ಹೆಸರಾಂತ ವೈದ್ಯ ಡಾ॥ಅಶೋಕ್ ಗೌಡ, ನಗರದ ವೈದ್ಯಕೀಯ ಕಾಲೇಜಿನ ಕ್ಯಾನ್ಸರ್ ಘಟಕದ ಮುಖ್ಯಸ್ಥ ಡಾ॥ಜಗದೀಶ್, ಸಮಾಜ ಸೇವಕ ಮಂಜುನಾಥ ಮೋರೆ ಸಂತಾಪ ಸೂಚಿಸಿದ್ದಾರೆ. 'ಜನತಾಮಾಧ್ಯಮ' ಬಳಗ ಕೂಡ ತೀವ್ರ ವಿಷಾದ ವ್ಯಕ್ತಪಡಿಸಿದೆ.

# ವೈದ್ಯರ ಮುಷ್ಕರ : ಚಿಕಿತ್ಸೆ ಫಲಿಸದೆ ರಾಜ್ಯದ ನಾಲ್ವರು ಬಲಿ

ಬೆಳಗಾವಿ : ಖಾಸಗಿ ಆಸ್ಪತ್ರೆಗಳ ತಿದ್ದುಪಡಿ ವಿಧೇಯಕ ವಿರೋಧಿಸಿ ಖಾಸಗಿ ಆಸ್ಪತ್ರೆಗಳ ವೈದ್ಯರು ಬೆಳಗಾವಿಯ ಸುವರ್ಣ ಸೌಧದ ಎದುರು ಹೋರಾಟವನ್ನು ಮಂಗಳವಾರ ಕೂಡ ಮುಂದುವರಿಸಿದ್ದು, ಅಮಾಯಕ ರೋಗಿಗಳ ಪ್ರಾಣ ಸಂಕಟ ಕೇಳುವವರಿಲ್ಲದಂತಾಗಿದೆ.



ಸರ್ಕಾರ ಮತ್ತು ಖಾಸಗಿ ವೈದ್ಯರ ನಡುವಿನ ಹಗ್ಗ-ಜಗ್ಗಾಟದಿಂದ ಅಮಾಯಕ ರೋಗಿಗಳ ಪರದಾಟ ತೀವ್ರಗೊಂಡಿದೆ. ವೈದ್ಯರ ಮುಷ್ಕರಕ್ಕೆ ಮಂಗಳವಾರ ಮತ್ತೆ ಮೂವರು ಬಲಿಯಾಗಿದ್ದಾರೆ. ಮೊನ್ನೆ ಇಬ್ಬರು ರೈತರು ಸಾವನ್ನಪ್ಪಿದ್ದು, ಮಂಗಳವಾರ ಸೂಕ್ತ ಚಿಕಿತ್ಸೆ ಸಿಗದೆ ಪಿಡಿಒ, ಮಗು, ಒಬ್ಬ ರೈತ ಸೇರಿದಂತೆ ಮೂವರು ಪ್ರಾಣ ಕಳೆದುಕೊಂಡಿದ್ದಾರೆ.

ಗರ್ಭಿಣಿಯರು ಸೂಕ್ತ ಚಿಕಿತ್ಸೆ ಸಿಗದೆ ನರಳಾಡಿದರೆ, ಮಕ್ಕಳು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ. ಹಾಸನ ಜಿಲ್ಲೆಯ ಸಿದ್ದಯ್ಯ ನಗರದಲ್ಲಿ ಸೂಕ್ತ ಚಿಕಿತ್ಸೆ ಸಿಗದೆ ನದೀಂಪಾಷ-ಫೈರೋಜಾ ದಂಪತಿಯ ಮೂರು ತಿಂಗಳ ಮಗು ಮೃತಪಟ್ಟಿದ್ದು, ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಮಗುವಿನ ಚಿಕಿತ್ಸೆಗಾಗಿ ಜಿಲ್ಲೆಯಾದ್ಯಂತ ಆಸ್ಪತ್ರೆಗಳನ್ನು ಹುಡುಕಾಡಿದ್ದಾರೆ. ಮಾರ್ಗಮಧ್ಯೆ ಮಗು ಮೃತಪಟ್ಟಿದೆ. (-ಪುಟ 4ಕ್ಕೆ)

### ಮುಷ್ಕರಕ್ಕೆ ನಗರದಲ್ಲಿ ಮಗು ಬಲಿ

ಹಾಸನ : ವೈದ್ಯರ ಮುಷ್ಕರದ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಖಾಸಗಿ ಆಸ್ಪತ್ರೆಗಳನ್ನು ಬಂದ್ ಮಾಡಿದ್ದರಿಂದ ಸರಿಯಾಗಿ ಚಿಕಿತ್ಸೆ ಲಭ್ಯವಾಗದೆ ನಗರದ 3 ತಿಂಗಳ ಕಂದಮ್ಮವೊಂದು ಮಂಗಳವಾರ ಬಲಿಯಾಗಿದೆ.

ನಗರದ ಸಿದ್ದಯ್ಯ ನಗರದಲ್ಲಿ ವಾಸವಾಗಿರುವ ನದೀಮ್ ಪಾಷ, ಹೆಂಡತಿ ಫೈರೋಜಾ ಎಂಬುವವರ ಮೂರು ತಿಂಗಳ ಪುತ್ರ ಇಬ್ರಾಹಿಂ ಮೃತಪಟ್ಟ ಮಗು.

ಆರೈಕೆಗೆಂದು ತಿಪಟೂರಿನ ತನ್ನ ತಾಯಿಯ ಮನೆಗೆ ಫೈರೋಜಾ ತೆರಳಿದ್ದರು. ಅಲ್ಲಿನ ಆಸ್ಪತ್ರೆಯಲ್ಲೇ ಮಗುವಿಗೆ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಆದರೆ ವೈದ್ಯರ ಮುಷ್ಕರದ ಹಿನ್ನೆಲೆಯಲ್ಲಿ ಮಗುವಿಗೆ ಸಮರ್ಪಕ ಚಿಕಿತ್ಸೆ ದೊರೆತಿರಲಿಲ್ಲ. ಇದರಿಂದಾಗಿ ಮಗುವಿನ ಸ್ಥಿತಿ ಗಂಭೀರವಾಗಿ ಹಾಸನಕ್ಕೆ ಕರೆತರುತ್ತಿದ್ದಾಗ ಮಾರ್ಗಮಧ್ಯೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ಕೊನೆಯುಸಿರೆಳೆದಿದೆ.

## ವೃದ್ಧರಿಗೆ 'ತ್ರಾಸ' ಕೊಡುವ ಭವಿಷ್ಯನಿಧಿ ಕಛೇರಿ

ಹಾಸನ : ನನಗೆ 80 ವರ್ಷ ವಯಸ್ಸಾಯಿತು. ಮೆಟ್ಟಿಲು ಹತ್ತಿಳಿಯುವುದರಲ್ಲಿ ಸಾಕು ಸಾಕಾಗಿ ಹೋಗುತ್ತದೆ. ಇವರು ಕಿಷ್ಕಿಂಧೆಯಂತಹ ಜಾಗದಲ್ಲಿ ಅದೂ ಮೊದಲ ಅಂತಸ್ತಿನಲ್ಲಿ ಕಛೇರಿ ತೆರೆದಿದ್ದಾರಲ್ಲ, ನಮ್ಮಂಥ ವಯಸ್ಸಾದವರು, ಕಾಯಿಲೆ ಪೀಡಿತರು, ಮುಖ್ಯವಾಗಿ ಅಂಗವಿಕಲರು ಏನು ಮಾಡಬೇಕು?

ನಗರದ ಶಂಕರ ಮಠ ರಸ್ತೆಯ ಮೊದಲ ತಿರುವಿನಲ್ಲಿರುವ ಜಿಲ್ಲಾ ನೌಕರರ ಭವಿಷ್ಯನಿಧಿ ಸಂಸ್ಥೆಗೆ ಬಂದಿದ್ದ ರಾಮಸ್ವಾಮಿ ಎಂಬುವವರು ಹೇಳಿದ ಮಾತುಗಳಿವು.

ಈ ಸಂಸ್ಥೆಗೆ ಪತ್ರಿಕೆ ಭೇಟಿ ಇತ್ತಾಗ ವೃದ್ಧ ಪುರುಷರು, ಮಹಿಳೆಯರು ಪ್ರಯಾಸದಿಂದ ಒಂದೊಂದೇ ಮೆಟ್ಟಿಲು ಹತ್ತಿ ಸಾಲಿನಲ್ಲಿ ನಿಂತಿದ್ದ ದೃಶ್ಯ ಕಂಡು ಬಂದಿತು.

'ನನಗೆ ಮೆಟ್ಟಿಲು ಹತ್ತಲು ಆಗುವುದಿಲ್ಲ ನನಗೆ ಪೆನ್ಷನ್ ಫಾರಂ ತಂದು ಕೊಡುವ ಉಪಕಾರ ಮಾಡುತ್ತೀರಾ' ಎಂದು ಅಂಗವಿಕಲರಾದ ಚಂದ್ರಶೇಖರರಾಜೇ ಅರಸ್ ವರದಿಗಾರರನ್ನು ಕೇಳಿದರು. 'ಮೆಟ್ಟಿಲು ಹತ್ತುವಾಗ ಬೆಂಬಲಕ್ಕೆ ಹಿಡಿದುಕೊಳ್ಳಲೂ ಗೋಡೆಗೆ ಕಂಬಿ ಅಳವಡಿಸಿಲ್ಲ. ವಯಸ್ಸಾದವರು ಮೆಟ್ಟಿಲು ಹತ್ತುವಾಗ ಅಕಸ್ಮಾತ್ ಆಯತಪ್ಪಿ ಅನಾಹುತವಾದರೆ ಯಾರು ಜವಾಬ್ದಾರರು?

ಕಮಲಾಕ್ಷಿ ಎನ್ನುವ ವೃದ್ಧೆ, 'ಮಹಡಿ ಹತ್ತಿ ಹೋದರೆ ಅಲ್ಲಿ ಗಾಳಿಯೇ ಸುಳಿದಾಡುವುದಿಲ್ಲ, ಉಸಿರು ಕಟ್ಟಿದಂತಾಗುತ್ತದೆ. ನಾನು ಒಂದು ಗಂಟೆ ಸಾಲಿನಲ್ಲಿ ನಿಂತುಕೊಂಡೆ. ಕೊನೆಗೆ ನಿಲ್ಲಲಾಗದೆ ಕೆಳಗಿಳಿದು ಬಂದು ಸುಧಾರಿಸಿಕೊಳ್ಳುತ್ತಿದ್ದೇನೆ' ಎಂದು ತಮಗಾದ ತೊಂದರೆಯನ್ನು ಹೇಳಿಕೊಂಡರು.

(-4ನೇ ಪುಟಕ್ಕೆ)

# ನವಜಾತ ಶಿಶುಗಳ ತೀವ್ರ ನಿಗಾ ಘಟಕ ಉದ್ಘಾಟನೆ

ಹಾಸನ : ಜಿಲ್ಲಾ ಆಸ್ಪತ್ರೆಯಲ್ಲಿ ನೂತನವಾಗಿ 55 ಹಾಸಿಗೆಗಳ ನವಜಾತ ಶಿಶುಗಳ ತೀವ್ರ ನಿಗಾ ಘಟಕವನ್ನು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಮಂಗಳವಾರ ಉದ್ಘಾಟಿಸಿದರು.

ಇದರಿಂದ ರಾಜ್ಯದಲ್ಲೇ ಅತಿ ಹೆಚ್ಚು ಹಾಸಿಗೆವುಳ್ಳ ನವಜಾತ ಶಿಶುಗಳ ತೀವ್ರ ನಿಗಾ ಘಟಕ ಎಂಬ ಹೆಗ್ಗಳಿಕೆಗೆ ಹಾಸನ ಜಿಲ್ಲಾ ಆಸ್ಪತ್ರೆ ಪಾತ್ರವಾಗಿದೆ.

ಮಕ್ಕಳ ದಿನಾಚರಣೆ ವಿಶೇಷ ಕೊಡುಗೆಯೆಂಬಂತೆ ಮಂಗಳವಾರ ತೀವ್ರ ನಿಗಾ ಘಟಕವನ್ನು ಜಿಲ್ಲಾಧಿಕಾರಿ ಅವರು ಸೇವೆಗೆ ಸಮರ್ಪಿಸಿದರು.

ರೇಡಿಯೆಂಟ್ ವಾರರ್, ನಿಯೋನಾಟಲ್ ವೆಂಟಿಲೇಟರ್, ಬಬ್ಬಲ್ ಸಿಪಿಎಪಿ, ಎಬಿಜಿ ಮೆಷಿನ್, ಸಿರಿಂಜ್ ಪಂಪ್ ಸೇರಿದಂತೆ ಇತರ ಸೌಲಭ್ಯಗಳನ್ನು ಈ ಕೇಂದ್ರ ಒಳಗೊಂಡಿದೆ. (-ಪುಟ 4ಕ್ಕೆ)




### 'ಜಿಲ್ಲಾಸ್ಪತ್ರೆ ಸೌಲಭ್ಯ ವೃದ್ಧಿಗೆ ಕಾಳಜಿ ವಹಿಸಿ'

ಹಾಸನ : ಇಲ್ಲಿನ ವೈದ್ಯಕೀಯ ವಿಜ್ಞಾನಗಳ ಮತ್ತು ಬೋಧಕ ಆಸ್ಪತ್ರೆ (ಹಿಮ್ಸ್)ಯಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಇನ್ನಷ್ಟು ಮೇಲ್ದರ್ಜೆಗೆ ಏರಿಸುವ ಮೂಲಕ ಇತರ ಜಿಲ್ಲೆಗಳಿಗೆ ಮಾದರಿಯಾಗುವಂತೆ ಸೇವಾ ಸೌಲಭ್ಯ ಒದಗಿಸುವ ಅಗತ್ಯವಿದ್ದು, ಈ ಗುರಿ ಸಾಧನೆಗೆ ಹೆಚ್ಚಿನ ಮುತುವರ್ಜಿ ವಹಿಸಬೇಕಿದೆ ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ತಿಳಿಸಿದ್ದಾರೆ.

ನಗರದ ಜಿಲ್ಲಾ ಆಸ್ಪತ್ರೆಯಲ್ಲಿ 55 ಹಾಸಿಗೆಗಳ ನವಜಾತ ಶಿಶುಗಳ ಚಿಕಿತ್ಸಾ ಘಟಕ ಉದ್ಘಾಟನೆ ನಂತರ ಹಾಸನ ವೈದ್ಯಕೀಯ ಕಾಲೇಜಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನವಜಾತ ಶಿಶುಗಳ ಮರಣ ಪ್ರಮಾಣವನ್ನು ಸಂಪೂರ್ಣ ನಿಯಂತ್ರಿಸಬೇಕೆಂಬುದು ತಮ್ಮ ಹಂಬಲವಾಗಿದೆ ಎಂದರು.

ಈ ಹಿಂದೆ ಕೇವಲ 20 ಹಾಸಿಗೆಗಳ ಎನ್.ಐ.ಸಿ.ಯು ಲಭ್ಯವಿದ್ದು, ನವಜಾತ ಶಿಶುಗಳ ಪ್ರಮಾಣ ಹೆಚ್ಚಿದ್ದು, ಸೋಂಕು ಹರಡುವ ಸಾಧ್ಯತೆಯು ಅಧಿಕವಾಗಿತ್ತು. ಇದೀಗ ನವಜಾತ ಶಿಶುಗಳ ಚಿಕಿತ್ಸಾ ಘಟಕದ ಸಾಮರ್ಥ್ಯವು 55 ಹಾಸಿಗೆಗಳಿಗೆ ಏರಿಕೆಯಾಗಿರುವುದರಿಂದ ಉತ್ಕೃಷ್ಟ ಗುಣಮಟ್ಟದ ಚಿಕಿತ್ಸೆ ಹೆಚ್ಚಿನ ಮಕ್ಕಳಿಗೆ ಸಿಗಲು ಸಾಧ್ಯವಾಗಿದೆ ಎಂದರು.